ಅಧ್ಯಕ್ಷರು : – ಮಾಲಿನ್ಯ ಇದೆ. ಪ್ರಸ್ತಾಪ ಮಾಡಿದ್ದೀರಿ, ಉತ್ತರ ಹೇಳಿ. ಇಡೀ detail ಗೆ ಹೋಗುವುದು ಬೇಡ.

ಶ್ರೀ ರಾಮಸ್ವಾಮಿಗೌಡ ಬಿ.ಬಿ. : – ಉದ್ದೇಶಪೂರ್ವಕವಾಗಿ ಬೆಂಗಳೂರಿನಲ್ಲಿರುವಂಥ ಮತ್ತು ಹೊರಗಡೆ ಸಿಗುವಂಥ wastage ನ್ನು ತಂದು ಹಾಕುತ್ತಿರುವುದರಿಂದ ಸಾಕಷ್ಟು ಪರಿಸರ ಹಾನಿಯಾಗುತ್ತಿದೆ.

ಶ್ರೀ ಸೊಗಡು ಶಿವಣ್ಣ ಎಸ್. (ಪರಿಸರ ಮತ್ತು ಜೀವಿಶಾಸ್ತ್ರ, ಯೋಜನೆ ಮತ್ತು ಸಾಂಖ್ಯಿಕ ಸಚಿವರು) : – ಮಾನ್ಯ ಅಧ್ಯಕ್ಷರೇ, 23ನೇ ತಾರೀಖು ಕಸ ಕಡ್ಡಿ ಹಾಕಿರುವ ಜಾಗದಲ್ಲಿ ಬೆಂಕಿ ಬಿದ್ದಿರುವುದು ಸತ್ಯ. ನಾನು ನಮ್ಮ ಜಿಲ್ಲಾಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ಮಾಡಿ ಅಲ್ಲಿ ಆಗುವಂಥ ಅನಾಹುತ ತಪ್ಪಿಸಿದ್ದೇವೆ. ಮೇಲಾಗಿ ಸಂಬಂಧಪಟ್ಟ ಸಂಸ್ಥೆಯವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಲಾಗಿದೆ.

9) ವಿಷಯ : ಅರಸೀಕೆರೆಯಲ್ಲಿ NAFED ನಿಂದ ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸುತ್ತಿರುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : – ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಅರಸೀಕೆರೆಯಲ್ಲಿ NAFED ನಿಂದ ಕೊಬ್ಬರಿಯನ್ನು ಬೆಂಬಲ ಬೆಲೆಗೆ ಖರೀದಿಸುತ್ತಿದ್ದಾರೆ. ಆದರೆ ಖರೀದಿಸಿದ 1 ತಿಂಗಳಾದರೂ ಸಹ ರೈತರಿಗೆ ಹಣವನ್ನು ಕೊಡುತ್ತಿಲ್ಲ. ಅದು ಅಲ್ಲದೆ ಬರೀ 250 ಚೀಟಿಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಅಲ್ಲಿ ಸಾವಿರಾರು ಚೀಲುಗಳು ಬರುತ್ತಿದೆ, ಅದಕ್ಕೆ ಲೇಬರ್‌ಗಳನ್ನು ಜಾಸ್ತಿ ಮಾಡಿ, ಪಾಯಿಂಟ್ಸ್ ಜಾಸ್ತಿ ಮಾಡಿ ಅತಿ ಜರೂರಾಗಿ ಕೊನೆ ಪಕ್ಷ ವಾರಕ್ಕೆ ಒಂದು ಸಾರಿಯಂತೆ ಪೇಮೆಂಟ್ ಕೊಡುವ ಸಿಸ್ಟಂನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದು ಬಹಳ ಗಂಭೀರವಾದ ವಿಚಾರ, ರೈತರ ಪ್ರಶ್ನೆ, ಬರ ಇದೆ. ಖರ್ಚಿಗೆ ದುಡ್ಡಿಲ್ಲ. ಆದ್ದರಿಂದ ಅವರ ದರ್ದಿಗೋಸ್ಕರವೇ ಸಂತೆಗೆ ಕೊಬ್ಬರಿ ತರುವುದು, 1 ತಿಂಗಳಾದರೂ ಪೇಮೆಂಟ್ ಮಾಡದಿದ್ದರೆ ರೈತರ ಗತಿ ಏನಾಗಬೇಕು ? ದಯವಿಟ್ಟು ಸರ್ಕಾರ ಸೂಕ್ತ ಕ್ರಮ ಜರುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : – ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿ ಮಾಡಿದ ತಕ್ಷಣ ಹಣ ಕೊಡಬೇಕು. ಯಾವುದೋ ಕಾರಣಗಳಿಂದ ವಿಳಂಬವಾಗುತ್ತಿದೆ ಎಂದು

ಹೇಳಿದ್ದಾರೆ. ನಾನು ಅಧಿಕಾರಿಗಳಿಗೆ ಸೂಚಿಸಿ ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಸೂಚಿಸುತ್ತೇನೆ. ಲೇಬರ್ ಹೆಚ್ಚು ಮಾಡುವುದಕ್ಕೆ ಎಚ್ಚರಿಕೆಯ ಏನು ಕ್ರಮವನ್ನು ವಹಿಸಬೇಕಾಗಿತ್ತೋ ಅದಕ್ಕೂ ಕೂಡ ಅಗತ್ಯ ಸೂಚನೆಯನ್ನು ಕೊಡಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : – ಸಂಬಂಧಪಟ್ಟ ಸಚಿವರು ಯಾರು ? ಕೃಷಿ ಸಚಿವರು ಎಲ್ಲಿ ಹೋಗಿದ್ದಾರೆ ? ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಕ್ರಮ ಕೈಗೊಂಡರೆ ಏನು ಪ್ರಯೋಜನ ? ಕೊಬ್ಬರಿ ದುಡ್ಡು ಹೋಗಬೇಕಾದರೆ ಕೃಷಿ ಸಚಿವರು ಕ್ರಮ ತೆಗೆದುಕೊಂಡರೆ ಜಲ್ದಿ ಹೋಗುತ್ತದೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : – ನಮ್ಮ ಅರಸೀಕೆರೆ ತಾಲ್ಲೂಕು ನನಗೂ ಬರುವುದರಿಂದ.

ಅಧ್ಯಕ್ಷರು : – ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ತಾಲ್ಲೂಕು ಬಂದರೆ ಬೇರೆ ರೂಪದಲ್ಲಿ ಕೇಳಿ, ಕರ್ನಾಟಕದೊಳಗೆ ತಾಲ್ಲೂಕು ಬರಲೇಬೇಕಲ್ಲ.

ಶ್ರೀ ವೈ.ಎನ್. ರುದ್ರೇಶ್‌ಗೌಡ : – 250 ಚೀಲಗಳ ಹಣ ವೇಗ ಕೊಡುವ ವ್ಯವಸ್ಥೆ ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : – ಇಬ್ಬರು ಎಂಎಲ್‌ಎ ಗಳು ಎಲ್ಲಿಗೆ ಹೋಗಿದ್ದಾರೆ ಎಂದು ಲೋಕಲ್ ಪೇಪರ್‌ನಲ್ಲಿ ಸ್ಟೇಟ್‌ಮೆಂಟ್ ಬಂದಿದೆ. ಸ್ವಲ್ಪ ತಿಳಿದುಕೊಳ್ಳಿ ಸರಿಯಾದ ರೀತಿಯಲ್ಲಿ ಉತ್ತರ ಕೊಡುವುದಕ್ಕೆ ಸಂಬಂಧಪಟ್ಟವರು ಇಲ್ಲವೆಂದರೆ ಹೇಗೆ ? ನೀವು ಹೇಳುತ್ತೀರಿ, ನಾವು ಕುಳಿತುಕೊಳ್ಳುತ್ತೇವೆ ಅಷ್ಟೇ. ಒಂದೂವರೆ ತಿಂಗಳುಗಳಾದರೂ ಪೇಮೆಂಟ್ ಆಗಿಲ್ಲವೆಂದರೆ ಆ ರೈತ ಮನೆ ವ್ಯವಹಾರ ಹೇಗೆ ನಡೆಸುತ್ತಾನೆ ? ನೀವೇ ಹೇಳಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : – ಸಂಬಂಧಪಟ್ಟವರು ಹೇಳಲಿ, ಕಾಗೇರಿಯವರು ಹೇಳಿದರೆ ಏನೂ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : – ಸರ್ಕಾರದ ಪರವಾಗಿ ಹೇಳಿದ್ದೇನೆ. ಕೃಷಿ ಸಚಿವರು ಪರಿಷತ್‌ನಲ್ಲಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : – ಸರ್ಕಾರದ ಪರವಾಗಿ ಹೇಳಿದರೆ ಆಗುತ್ತದೆಯೇ ? ಸಂಬಂಧಪಟ್ಟವರು ಉತ್ತರವನ್ನು ಹೇಳಬೇಕು. ಅತಿ ಜರೂರಾಗಿ ಕ್ರಮವನ್ನು ಜರುಗಿಸಬೇಕು. ರೈತರು ಎಂದರೆ ಸಾಕು ನಿಮಗೆ ಉದಾಸೀನ.